ಮಣಭಾರದ ವಸ್ತುವೊಂದು ಬಿದ್ದಂತಾಯಿತು. ಹಿತೇಶ ತುಟಿಗಳ ಬಿಗು ಕಡಿಮೆ ಮಾಡಿ ಪಾಂಬುವಿನತ್ತ ನೋಡಿದ.

'ಲಹರಿಯ ವಿಷಯದಲ್ಲಿ ನೀನು ಇವನ ಸಹಾಯ ಪಡೀಬಹುದು. ಈತ ನನ್ನ ಆತ್ಮೀಯ ಗೆಳೆಯ ಮುತ್ತುಚಾಂಡಿ. ನಾವಿಬ್ಬರು ಜೊತೆಯಾಗಿ ಮೀನಿನ ಏಲಂ ಕೆಲಸ ಮಾಡ್ತಾ ಇದ್ದೆವು. ಕೊಚ್ಚಿಯ ಕಡಲತೀರದಲ್ಲಿ ನನಗೆ ಪರಿಚಿತನಾದವನು ಮಾತ್ರವಲ್ಲ, ನನ್ನ ಜೀವ ಉಳಿಸಿದೋನು. ಈಗ ಇಲ್ಲಿಯ ದಾಬಾದ ಒಡೆಯ' ಸಮಾಧಾನದ ಮಾತಿನಿಂದ ನುಡಿದ ಪಾಂಬು.

ಬಲಾಢ್ಯ ಪಕ್ಕದ ಚೇರನ್ನು ಎಳೆದು ಕುಳಿತ.

'ನೋಡು, ಹುಡುಗ. ನಾನು ನಲ್ಲವನ್. ನನಗೆ ನೀನು ಬೇರೆಯಲ್ಲ, ಈ ಪಾಂಬು ಬೇರೆಯಲ್ಲ. ಕಷ್ಟದಲ್ಲಿರೋನಿಗೆ ಸಹಾಯ ಮಾಡೋದು ನನ್ನ ಕೆಲಸ. ನನಗೆ ನಿನ್ನ ವಿಷಯವೆಲ್ಲಾ ಗೊತ್ತಾಗಿದೆ. ನೀನು ತಲೆಬಿಸಿ ಮಾಡ್ಕೊಳ್ಬೇಡ. ನಿನ್ನ ಸಹಾಯಕ್ಕೆ ನಾನಿದ್ದೇನೆ' ಹಿತೇಶನ ಬೆನ್ನಿನ ಮೇಲೆ ಕೈಯನ್ನು ನಯವಾಗಿ ಒರೆಸಿದ. ಹಿತೇಶನ ಮೈ ನಡುಗಿತು. ಪಾಂಬು ತನ್ನನ್ನು ಸರಿಯಾದ ಸರಳುಗಳ ಹಿಂದೆ ಬಂಧಿಸುತ್ತಿದ್ದಾನೆ!

'ಖಂಡಿತವಾಗಿಯೂ ಅಗತ್ಯವೆನಿಸಿದರೆ ನಿನ್ನ ಸಹಾಯ ಕೇಳ್ತೀನಿ, ಮುತ್ತುಚಾಂಡಿ. ಸದ್ಯಕ್ಕಂತು ಪಾಂಬು ನನ್ನ ಜೊತೆಗಿದ್ದಾನೆ' ಮಾತು ಅಳುಕಿತು.

'ನನ್ನ ಮೇಲೆ ಭರವಸೆಯಿಲ್ಲ ನಿನಗೆ?' ನಕ್ಕ ಮುತ್ತುಚಾಂಡಿ.

'ಹಾಗಲ್ಲ, ನನ್ನ ಕಷ್ಟಕ್ಕೆ ಖಂಡಿತವಾಗಿಯೂ ನಿನ್ನ ಸಹಾಯ ಪಡ್ಕೊಳ್ತೀನಿ' ತುಸು ಧೈರ್ಯ ಮೂಡಿತು.

ಮುತ್ತುಚಾಂಡಿ ಬೇರರನ್ನು ಕರೆದು ಅವರಿಗೆ ರೋಟಿ, ಮಸಾಲ ತರುವಂತೆ ಸೂಚಿಸಿದ. ಬೇರರು ಬಿಸಿಬಿಸಿಯಾದ ರೋಟಿ, ಮಸಾಲೆಗಳನ್ನು ಐದು ನಿಮಿಷಗಳಲ್ಲಿಯೇ ತಂದು ಅವರ ಮುಂದಿರಿಸಿದ. ಹಿತೇಶನಿಗೆ ಹಸಿವು ಕಟ್ಟಿತ್ತು. ಮೀನು ಬಲೆಯೊಳಗೆ ಬಿದ್ದು ಚಡಪಡಿಸಿದಂತೆ ಕಾಣಿಸಿದ. ತಾನೇನೋ ಬಲೆಯೊಳಗೆ ಬಂಧಿಯಾಗಿರುವಂತೆ ಅವನಿಗೆ ಸಂದೇಹ.

'ನಿನಗೆ ಇಲ್ಲಿಗೆ ಬರಬೇಕೆನಿಸಿದರೆ ಯಾವಾಗಲಾದರೂ ಬಾ' ಮುತ್ತುಚಾಂಡಿ ಅವನ ಕೈ ಕುಲುಕಿ ಅಲ್ಲಿಂದ ಎದ್ದು ಹೋದ. ಪಾಂಬು ಅವನನ್ನು ಹಿಂಬಾಲಿಸಿದ. ಹತ್ತು ನಿಮಿಷ ಅವರಿಬ್ಬರೂ ಹಿತೇಶನ ಕಣ್ಣಿಗೆ ಕಾಣಿಸಲಿಲ್ಲ! ಹಿತೇಶನ ಮುಂದಿದ್ದ ತಿನಿಸುಗಳು ಹಾಗೆ ಇದ್ದವು. ಅವನು ಆಲೋಚನೆಗೊಳಗಾಗಿದ್ದ.

'ಏನು, ನೀನು ಏನನ್ನೂ ತಿಂದಿಲ್ವ?' ಪ್ರಶ್ನೆ ಬಂದಾಗ ಎಚ್ಚೆತ್ತ.

ಪಾಂಬು ಅರ್ಧ ಮುಗಿಸಿದ್ದನ್ನು ತಿನ್ನತೊಡಗಿದ. ಹಿತೇಶ ಹಸಿವಿಲ್ಲವೆನ್ನುವಂತೆ ಸಂಜ್ಞೆ ಮಾಡಿದಾಗ ಪಾಂಬು ಅವನನ್ನು ಒತ್ತಾಯಿಸಿದ.

'ತಿನ್ನು, ಇನ್ನು ಸಿಟಿ ಸೇರಿದ ಮೇಲೆ ಊಟ ಸಿಗಲಾರದು'

ಹಿತೇಶ ನಿರಾಕರಿಸಿದ. ಹತ್ತು ನಿಮಿಷದಲ್ಲಿಯೇ ಅವರು ಕಾರೇರಿದರು. ಆ ಸಮಯದಲ್ಲಿ ಮುತ್ತುಚಾಂಡಿಯ ಸುಳಿವಿರಲಿಲ್ಲ. ಹಿತೇಶ ನಿಟ್ಟುಸಿರಿಟ್ಟ. ಕಾರು ಮತ್ತೆ ಹೈವೆ ಸೇರಿತು.

'ನೀನು ಸುಮ್ನೆ ದಾಬಾಕ್ಕೆ ನನ್ನನ್ನು ಎಳ್ಕೊಂಡು ಬಂದೆ. ನನಗೆ ನಿನ್ನ ಗೆಳೆಯನನ್ನು ಪರಿಚಯ ಮಾಡಿಸಿ ನಿನ್ನ ಬೆಂಬಲಿಗರನ್ನು ತೋರಿಸಿ ಕೊಳ್ಳೋದಿಕ್ಕೆ. ಪ್ರಭಾಕರ, ನಾನು ಯಾರಿಗೂ ಹೆದರೋನಲ್ಲ. ಲಹರಿಯನ್ನು ಪ್ರೀತಿಸುವಾಗಲೂ ನನಗೆ ಎಂತೆಂತ ಬೆದರಿಕೆಗಳಿದ್ದವು ಅನ್ನೋದು ನಿನಗೆ ಗೊತ್ತಿದೆ. ಅವನ್ನೆಲ್ಲಾ ನಾನು ಗಣನೆಗೆ ತೆಗೆದುಕೊಳ್ಳಲಿಲ್ಲ'.

ಪಾಂಬು ಹಿತೇಶನ ಮುಖವನ್ನು ಗಮನಿಸಿದ. ಆತ ಮುತ್ತುಚಾಂಡಿಯನ್ನು ಕಂಡಾಗ ಸಂಪೂರ್ಣ ಬೆದರಿದ್ದನ್ನೂ ಗಮನಿಸಿದ್ದ. ಪಾಂಬುವಿನ ತುಟಿಯಲ್ಲಿ ನಗು ಸುಳಿಯಿತು.

'ಹಿತೇಶ, ನಿನ್ನನ್ನು ಉದ್ದೇಶಪೂರ್ವಕವಾಗಿ ಕರೆತಂದಿಲ್ಲ. ನನ್ನ ಬಲ ಪ್ರದರ್ಶನವನ್ನು ನಿನ್ನ ಮುಂದೆ ತೋರಿಸಿಕೊಳ್ಳುವ ಅಗತ್ಯವೇನಿದೆ? ನಿನ್ನ ಹಿತೈಷಿ ನಾನು ಅಂದ್ಕೊಲ್ಲ. ಅದಕ್ಕೆ ನಿನಗೆ ಸಹಾಯ ಮಾಡೋಣಾಂತ ಇಲ್ಲಿಗೆ ಕರ್ಕೊಂಡು ಬಂದೆ'

ಹಿತೇಶನಿಗೆ ಮಾತು ಕಟ್ಟಿತು. ಪಕ್ಕದಲ್ಲಿದ್ದವನ ಮಾತು ಸತ್ಯವೇನೋ ಅನ್ನುವಷ್ಟು.

'ಆದ್ರೆ ನೀನು ಇಲ್ಲಿಯವರೆಗೆ ಮುತ್ತುಚಾಂಡಿಯ ಬಗ್ಗೆ ನನ್ನತ್ರ ಹೇಳ್ಲೇ ಇಲ್ಲ' ಆರೋಪವಿತ್ತು ಮುಗ್ಧನ ಮಾತಿನಲ್ಲಿ.



## ಇಲ್ಲಿಯವರೆಗೆ

ಮರಳು ದಿಣ್ಣೆಗೆ ಬಂದಿದ್ದ ಲಹರಿ ಕಾಣೆಯಾಗುತ್ತಾಳೆ. ಈ ಬಗ್ಗೆ ದೂರು ದಾಖಲಾಗುತ್ತದೆ. ಅದಕ್ಕೆ ಸಂಬಂಧಿಸಿದ ಫೈಲ್ ಅನ್ನು ಇನ್ಸ್‌ಪೆಕ್ಟರ್ ಸಾರಂಗನ ಬಳಿ ಕೇಳುತ್ತಾನೆ. ಅದು ಇಲ್ಲೇ ಇದೆ ಎಂದು ಕೊಟ್ಟ ಮೇಲೆ ಇನ್ಸ್‌ಪೆಕ್ಟರ್ ಬಂಡೆಯ ಕಡೆಗೆ ದಾಪುಗಾಲು ಹಾಕುತ್ತಾನೆ. ಲಹರಿಯ ಕಣ್ಮರೆಯ ಹಿಂದೆ ಕಾಕುಟ್ಟನ ಕೈವಾಡ ಇದೆ ಎಂದು ಪಾಂಬು ಕ್ಲೂ ಕೊಡುತ್ತಾನೆ. ಸಾರಂಗನನ್ನು ಡಿಪಾರ್ಟ್‌ಮೆಂಟ್‌ಗೆ ವಾಪಾಸ್ ಕರೆಸಿಕೊಂಡ ಬಗ್ಗೆ ಬಾಸ್ ಮೆಚ್ಚುಗೆ ವ್ಯಕ್ತಪಡಿಸುತ್ತಾನೆ. ಇನ್ಸ್‌ಪೆಕ್ಟರ್ ರಾಜಧಾನಿ ಕೂಡ ಗೆಲುವಿನ ನಗೆ ಚೆಲ್ಲುತ್ತಾನೆ.

ಇತ್ತ ಮರಳಿನ ಮೇಲೆ ದೊಪ್ಪನೆ ಬೀಳುತ್ತಾನೆ ಪಾಂಬು. ಅವನನ್ನು ಪಕ್ಕನೆ ಪಿಸಿ ಸಾರಂಗನಿಗೆ ಗುರುತಿಸಲಾಗಲಿಲ್ಲ. ಅದಾಗಿ ಸಾವರಿಸಿಕೊಳ್ಳಲು ಹೇಳುತ್ತಾನೆ ಸಾರಂಗ. ಬೈಕ್‌ನಲ್ಲಿ ಹೋಗುತ್ತಿರುವಾಗ ಪಿಸಿ, ಲಹರಿ ಕಣ್ಮರೆಗೆ ಸಂಬಂಧಿಸಿದ ಸಾಕ್ಷಿ ನೋಡಿರುವುದಾಗಿ ಇನ್ಸ್‌ಪೆಕ್ಟರ್‌ಗೆ ಹೇಳುತ್ತಾನೆ. ತಕ್ಷಣ ಬೈಕ್ ನಿಲ್ಲಿಸಿದ ಇನ್ಸ್‌ಪೆಕ್ಟರ್‌ಗೆ ಅಚ್ಚರಿ, ಕುತೂಹಲ ಎರಡೂ ಉಂಟಾಗುತ್ತದೆ.

'ಅಂತಹ ಸಂದರ್ಭ ಬಂದಿರಲಿಲ್ಲ. ಈಗ ಕಾಲ ಕೂಡಿ ಬಂದಿದೆ. ಅದಕ್ಕಾಗಿಯೇ ಕರ್ಕೊಂಡು ಬಂದೆ. ಮುತ್ತುಚಾಂಡಿಗೆ ಪರಿಚಯವಿಲ್ಲದವರಿಲ್ಲ. ಎಲ್ಲರಿಗೂ ಅವನು ಬೇಕಾದವನು. ನಮ್ಮ ಪೊಲೀಸ್ ಇಲಾಖೆಗೂ ಆತ ಅಗತ್ಯವಾಗಿ ಬೇಕಾದ ವ್ಯಕ್ತಿ'

ಹಿತೇಶನಿಗೆ ಮತ್ತೆ ಸಂದೇಹ. ಪೊಲೀಸ್ ಮುತ್ತುಚಾಂಡಿಯನ್ನು ಭೇಟಿಯಾಗುತ್ತಿರುತ್ತಾರೆ. ಹಾಗಾಗಿ ಪಾಂಬುವಿಗೂ ಇನ್ಸ್‌ಪೆಕ್ಟರ್ ಹೆಗಲಿಗೆ ಕೈ ಹಾಕಿ ಮಾತಾಡುವಷ್ಟು ಆತ್ಮೀಯ! ಏನಾದರಾಗಲಿ ಪಾಂಬುವಿನ ಮೇಲೆ ಒಂದು ಹದ್ದಿನ ಕಣ್ಣಿಡುವುದು ಒಳ್ಳೆಯದು.

ಹಿತೇಶ ಸುಮ್ಮನೆ ತಲೆಯಲುಗಿಸಿದ. ಪಾಂಬುವಿಗೆ ಪಕ್ಕದಲ್ಲಿ ಕುಳಿತವನಿಗೆ ತನ್ನ ಮೇಲೆ ವಿಶ್ವಾಸ ಮೂಡಿತೆನ್ನುವ ಭರವಸೆ.

ಕಾರನ್ನು ಮತ್ತಷ್ಟು ವೇಗಗೊಳಿಸಿ ಸಿಟಿಯತ್ತ ಓಡಿಸಿದ. ಹಿತೇಶನ ಮೆದುಳು ಬೆಳಗಿನಿಂದ ನಡೆದ ಘಟನೆಗಳನ್ನು ಮೆಲುಕು ಹಾಕುತ್ತಾ ಕಾರಿಗಿಂತಲೂ ವೇಗವಾಗಿ ಓಡುತಲಿತ್ತು.

ಸಿಟಿಯ ಒಳಗೆ ಕಾರು ಪ್ರವೇಶಿಸುತ್ತಲೇ ವೇಗ ಇಳಿಯಿತು. ಪಾಂಬು ಹಿತೇಶನ ಅಪಾರ್ಟ್‌ಮೆಂಟ್‌ನ ಬಳಿ ಕಾರನ್ನು ನಿಲ್ಲಿಸಿದ. ದೂರದಲ್ಲಿ ನಿಲ್ಲಿಸಿದ ಬೈಕ್‌ನಲ್ಲಿ ಇಳಿದ ಇಬ್ಬರು ವ್ಯಕ್ತಿಗಳು ಹಿತೇಶ ಮೆಟ್ಟಿಲೇರುವುದನ್ನೇ ಗಮನಿಸುತ್ತಿದ್ದರು.

ಹಿತೇಶ ತನ್ನ ಕೋಣೆ ಸೇರುತ್ತಿದ್ದಂತೆ ಪಾಂಬುವಿನ ಕಾರು ನಿಧಾನವಾಗಿ